SERVICE ABOVE SELF




Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –03 ದಿನಾಂಕ : 16–07–2025

## ದಿನಾಂಕ: 16.07.2025 ರ ಮೊದಲನೇ ವಾರದ ಸಭೆ

**2025–26 ನೇ ಸಾಲಿನ ಮೂರನೇ ಸಭೆ. ದಿನಾಂಕ: 16.07.2025 ರಂದು ನಮ್ಮ ರೋಟರಿ ಯುವಕೇಂದ್ರದಲ್ಲಿ ನಡೆಯಿತು. ಅಂದು ಅದು ಕ್ಲಬ್ ಅಫೇರ್ಸ್ ಸಭೆ. 2025–26 ನೇ ಸಾಲಿನ ಬಜೆಟ್ ಮಂಡನೆ ಮತ್ತು ಮುಂದಿನ ಯೋಜನೆಗಳ ಕುರಿತು ಮಾತುಕತೆ. ವೇದಿಕೆಯಲ್ಲಿ ಅಧ್ಯಕ್ಷರಾದ ರೊ. ಆರ್.ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ ಮತ್ತು ಖಜಾಂಚಿ ರೊ.ಲಕ್ಷ್ಮೀನಾರಾಯಣ ಭಟ್ಟರು ಉಪಸ್ಥಿತರಿದ್ದರು.**










ಅಂದಿನ ಸಭೆಯು ರೊ.ಎಂ.ಎನ್.ಎಸ್. ಮಣಿಯವರ ಸುಶ್ರಾವ್ಯಗಾಯನ"ತಿಳಿಯದೋ ನಿನ್ನಾಟ ತಿರುಪತಿ ವೆಂಕಟರಮಣ" ಎಂಬ ಹಾಡಿನಿಂದ ಸಭೆಗೆ ಚಾಲನೆ.ರೊ.ಕೆ.ಸಿ.ದಶರಥರವರಿಂದ ಸರ್ವರಿಗೂ ಸ್ವಾಗತವಾಯಿತು. ರೊ. ಎನ್.ವಿ.ಭಟ್‌ರವರು ರೋಟರಿ ಮಾಹಿತಿ ಓದಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ನೀಡುತ್ತಾ, ಇತ್ತೀಚೆಗೆ ನಡೆದ ಕಾರ್ಯಕಾರಿ ಮಂಡಳಿ ಸಭೆಯು ನೂತನ ಅಧ್ಯಕ್ಷರಾದ ರೊ.ಆರ್.ಆನಂದರವರ ಮನೆಯಲ್ಲಿ ನಡೆದುದರ ಬಗ್ಗೆ ವಿವರಿಸಿದರು. ರೊ. ಕೆ.ಸೂರ್ಯನಾರಾಯಣ ಉಡುಪರು ಅವರ ಅವಧಿಯಲ್ಲಿ ದೇಣಿಗೆ ನೀಡಿ ಸಹಕರಿಸಿದ ರೊ.ಕೆ.ಸಿ.ದಶರಥರವರಿಗೆ ನೆನಪಿನ ಕಾಣಿಕೆ ನೀಡಿದರು.

2024–25 ನೇ ಸಾಲಿನ ಖಜಾಂಚಿ ರೊ.ಎಸ್.ಜಿ. ಗೋಪಾಲ್, ರೊ.ಕೆ.ಸೂರ್ಯನಾರಾಯಣ ಉಡುಪರು, ಅವರ ಅವಧಿಯ ಲೆಕ್ಕಪತ್ರಗಳನ್ನು ಮಂಡಿಸಿದರು. ಸಭೆ ಒಪ್ಪಿಗೆ ನೀಡಿತು.

ಖಜಾಂಚಿ ರೊ.ಲಕ್ಷ್ಮೀನಾರಾಯಣ ಭಟ್‌ರವರು 2025–26 ನೇ ಸಾಲಿನ ರೋಟರಿ ಬಜೆಟ್‌ನ್ನು ಮಂಡಿಸಿದರು.

ರೊ.ಎಸ್.ಜಿ. ಗೋಪಾಲ್, ರೊ. ಕೆ.ಸೂರ್ಯನಾರಾಯಣ ಉಡುಪರು, ರೊ. ಹೆಚ್.ಡಿ. ಉದಯಶಂಕರ ಶಾಸ್ತ್ರಿಯವರು, ರೊ. ಪಿಡಿಜಿ. ಡಾ.ಆರ್.ಡಿ.ಪ್ರಭು, ರೊ.ಪಿಡಿಜಿಡಾ. ಪಿ. ನಾರಾಯಣರವರು, ರೊ.ಡಿ.ಎಸ್. ನಟರಾಜ್‌ರವರು, ರೊ.ಟಿ.ಕೆ.ಎಂ.ಭಟ್, ರೊ.ಪೇಟೆ ಅಜಯಕುಮಾರ್‌ರವರು ಬಜೆಟ್ ಮೇಲೆ ಮಾತನಾಡಿದರು. ಮುಖ್ಯವಾಗಿ ಬುಲೆಟಿನ್ ಮುದ್ರಣ ಮತ್ತು ಕೆಲವೊಂದು ಖರ್ಚಿನ ಅಲೋಕೇಶನ್‌ಗಳ ಬಗ್ಗೆ ಚರ್ಚೆಯಾಯಿತು. ಬುಲೆಟಿನ್ ದುಬಾರಿಯಾದಲ್ಲಿ ಜಾಹಿರಾತನ್ನು ಪಡೆಯಿರಿಎಂದು ತಿಳಿಸಲಾಯಿತು. ರೋಟರಿ ನ್ಯೂಸ್ ಚಂದಾದಾರಿಕೆ ಬಗ್ಗೆ ಗಮನ ಹರಿಸಲು ಸೂಚಿಸಲಾಯಿತು. ಬಜೆಟ್‌ನ್ನು ವಾಸ್ತವಕ್ಕೆ ಹತ್ತಿರದಂತೆ ರಚಿಸಲಾಗಿದ್ದು, ಅದರಲ್ಲಿನ ಕೆಲವೊಂದು ಅಂಶಗಳನ್ನು

## ಈ ವಾರದ ಸಭೆ

**ದಿನಾಂಕ :23–07–2025 ಬುಧವಾರ ಸಂಜೆ 6:45**

**ಅತಿಥಿ:**

**ಡಾ. ವಾಣಿಕೋರಿ**


**ವಿಷಯ:**

**ತಾಯಿ ಮತ್ತು ಮಗುವಿನ ಆರೋಗ್ಯ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ
















ತಿದ್ದುಪಡಿ ಮಾಡಲಾಗುವುದು ಎಂದರು. ನೂತನ ಬಜೆಟ್‌ನ್ನು ರೊ.ಎನ್.ಎಸ್. ಶ್ರೀಧರ್‌ರವರು ಸೂಚಿಸಿದರು. ರೊ. ವೀರಣ್ಣ ಎ. ಹುಗ್ಗಿಯವರು ಅನುಮೋದಿಸಿದರು.

ಇದೇ ಸಂದರ್ಭದಲ್ಲಿ ಪದವೀ ಸ್ವೀಕಾರ ಸಮಾರಂಭದಲ್ಲಿ ಕೊಡಲಾಗದಿದ್ದ ಸ್ಕಾಲರ್‌ಶಿಪ್ – ಕು.ನಿತ್ಯಾ ಎಂ.ಕುಲಕರ್ಣಿಯವರಿಗೆ ಅವರ ತಂದೆ ಮುರಳೀಧರ ಕುಲಕರ್ಣಿಯವರಿಗೆ ನೀಡುವುದರ ಮೂಲಕ ಪ್ರದಾನ ಮಾಡಲಾಯಿತು. ಸ್ಕಾಲರ್‌ಶಿಪ್ ಸ್ವೀಕರಿಸಿ ಮಾತನಾಡಿದ ಶ್ರೀ ಮುರಳೀಧರ್ ಕುಲಕರ್ಣಿಯವರು ವಿದ್ಯಾರ್ಥಿಗಳಿಗೆ ಅವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಕೊನೆಯಲ್ಲಿ ರೊ.ಆನಂದರವರು ಮಾತನಾಡಿ, ಇಂದಿನ ಬಜೆಟ್ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡು ಸಹಕರಿಸಿದ ಸರ್ವರಿಗೂ ವಂದಿಸಿದರು. ಅದರ ಸಾಧಕ ಬಾಧಕಗಳನ್ನು ಗಮನಿಸಿ ಮುಂದುವರೆಯುತ್ತೇವೆ ಎಂದರು. ಅಲ್ಲದೇ ತಾವು ಕೈಗೊಳ್ಳುವ ಹಲವಾರು ಪ್ರಾಜೆಕ್ಟಗಳಿಗೆ ದೇಣಿಗೆ ಮತ್ತಿತರ ಸಹಕಾರವನ್ನು ನೀಡಬೇಕಾಗಿ ಮನವಿ ಮಾಡಿದರು. ಕೊನೆಯಲ್ಲಿ ರೊ.ಚಂದ್ರಪ್ಪನವರು ವಂದನಾರ್ಪಣೆ ಮಾಡಿದರು.

One of the world's most widely printed and quoted statements of business ethics is The Four-Way Test, which was created in 1932 by Rotarian Herbert J. Taylor (who later served as RI president) when he was asked to take charge of a company that was facing bankruptcy.

This 24-word test for employees to follow in their business and professional lives became the guide for sales, production, advertising, and all relations with dealers and customers, and the survival of the company is credited to this simple philosophy.

Adopted by Rotary in 1943, The Four-Way Test has been translated into more than a hundred languages and published in thousands of ways.

## THE 4-WAY TEST


1. Is it the TRUTH
2. Is it FAIR to all concerned?
3. Will it build GOODWILL & BETTER FRIENDSHIP?
4. Will it be BENEFICIAL to all concerned?

## DISTRICT PROJECT -2025-26


1. ಶಿಕ್ಷಣ : EDUCATION
2. ಹಸಿರೇ ಉಸಿರು : ENVIRONMENT
3. ಆರೋಗ್ಯ HEALTH
4. ರಸ್ತೆ ಸುರಕ್ಷತೆ : ROAD SAFETY

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

## ಸುದ್ದಿ ಮಿಂಚು:



ರೊ.ಪಿಡಿಜಿ ಡಾ. ಪಿ. ನಾರಾಯಣರವರನ್ನು ದಿನಾಂಕ: 13.07.2025 ರಂದು ನಗರದ ಗಾಯತ್ರಿ ಮಾಂಗಲ್ಯ ಮಂದಿರದಲ್ಲಿ ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದಿಂದ ಸನ್ಮಾನಿಸಲಾಗಿದೆ.




## ROTARY DESIGNATED MONTHS

ACTIVITIES THAT CAN BE TAKEN-UP BY CLUBS




### 1. Maternal and Child Health Month

- Address the issue of malnutrition in children and pregnant women.
- Provide low-income and undernourished women with the knowledge and skills and opportunities to improve their diet, physical activity, immunisation.
- Promote school health program.
- Conduct awareness seminars.
- Health check-ups in child care centres, schools and work sites.

## ರೋಟರಿ ವಾರ್ತೆಗಳು :
## ರೊ. ಡಿ.ಎಲ್. ಮಂಜುನಾಥರವರಿಂದ

1. R.I. District 3131 ರ ಪುಣೆ Pristaine ರೋಟರಿ ಕ್ಲಬ್ ಸಂಸ್ಥೆಯು ಉಚಿತ ರೇಡಿಯೇಶನ್ ಚಿಕಿತ್ಸೆಯನ್ನು ಕ್ಯಾನ್ಸರ್ ರೋಗಿಗಳಿಗೆ ಒದಗಿಸುವ ಬೃಹತ್ ಕಾರ್ಯಕ್ರಮವನ್ನು ಸುಮಾರು 12 ಕೋಟಿ ರೂಗಳ ಯೋಜನೆಯೊಂದಿಗೆ ಸಾಕಾರಗೊಳಿಸಿದ್ದಾರೆ. ಈ ಯೋಜನೆಗೆ ರೋಟರಿ ಫೌಂಡೇಷನ್ ವತಿಯಿಂದ 4.2 ಕೋಟಿ ರೂಗಳ ದೇಣಿಗೆ ದೊರಕಿದೆ. ಇದೊಂದು ಬಹಳ ವಿಶೇಷವಾದ ಮಾನವೀಯ ಯೋಜನೆಯಾಗಿದ್ದು, ಹಲವಾರು ಕ್ಯಾನ್ಸರ್ ರೋಗಿಗಳಿಗೆ ಪ್ರಾರಂಭಿಕ ಹಂತದ ಚಿಕಿತ್ಸೆಗೆ ವರದಾನವಾಗಿದೆ.

2. ರೋಟರಿ ಕ್ಲಬ್, ಹುಬ್ಬಳ್ಳಿ ದಕ್ಷಿಣರೋಟರಿಜಿಲ್ಲೆ 3130 ರವರು 50 ಲಕ್ಷ ರೂಗಳ ಒಂದು ಯೋಜನೆಯೊಂದಿಗೆ ಡಯಾಲಿಸಿಸ್ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಇತರೇ ಸ್ಥಳಗಳಲ್ಲಿ ಡಯಾಲಿಸಿಸ್‌ಗೋಸ್ಕರ ಸುಮಾರು 2500 ರೂಗಳು ತಗುಲಲಿದ್ದು, ಈ ಯೋಜನೆಯಿಂದ ಹಲವಾರು ರೋಗಿಗಳಿಗೆ ಒಂದು ಸಾವಿರ ರೂಗಳಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳುವ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ.

3. ರೋಟರಿ ಕ್ಲಬ್, ಈರೋಡ್ ಕ್ರಾಸ್, ರೋಟರಿಜಿಲ್ಲೆ 3203 ನಗರ ಪಾಲಿಕೆಯ ಪೌರ ಕಾರ್ಮಿಕರುಗಳಲ್ಲಿ ನಗರ ಶುಚಿತ್ವ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಯವರಿಗೆ, ನಗರ ಪಾಲಿಕೆಯವರ ಸಹಕಾರದೊಂದಿಗೆ ಸುಮಾರು 500 ಸಿಬ್ಬಂದಿಗಳಿಗೆ ವಿವಿಧ ಆಟೋಟಗಳನ್ನು ಏರ್ಪಡಿಸಿ ಬಹುಮಾನ ವಿತರಣೆಯೊಂದಿಗೆ ಎಲ್ಲಾ ಸಿಬ್ಬಂದಿಗಳಿಗೆ ಒಂದು ದಿನದ ಉಟೋಪಚಾರದೊಂದಿಗೆ ಮನಸ್ಸಂತೋಷಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲಾ ಸಿಬ್ಬಂದಿಗಳು ನಲಿದು ಸಂತೋಷಪಟ್ಟರು. ಇದೊಂದು ಇತರರನ್ನು ಸಮಮನಸ್ಕರಂತೆ ಗೌರವಿಸುವ ವಿಭಿನ್ನಕಾರ್ಯಕ್ರಮವಾಗಿತ್ತು.

4. ರೋಟರಿ ಕ್ಲಬ್ ನೈವೇಲಿ ಲಿಗ್ನೈಟ್ ಸಿಟಿ, ರೋಟರಿಜಿಲ್ಲೆ 2981 ರವರುನೈವೇಲಿ ಲಿಗ್ನೈಟ್ ಅಯ್ಯನೂರು ರಸ್ತೆಗೆ ಸೌರಚಾಲಿತ ದೀಪವನ್ನು ಅಳವಡಿಸುವ ಬೃಹತ್ ಕಾರ್ಯಕ್ರಮವನ್ನು ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ಅಳವಡಿಸಿ ರೋಟರಿ ಜಿಲ್ಲೆಯ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

5. ರೋಟರಿ ಜಿಲ್ಲೆ 3132 ಮತ್ತು 3131ರವರುಗಳ ಸಹಯೋಗದೊಂದಿಗೆ ಜಮ್ಮು ಕಾಶ್ಮೀರದ ಉತ್ತರ ಕಾಶ್ಮೀರ ಜಿಲ್ಲೆಯಾದ ಕುಪುವಾರ, ಬಾರಾಮುಲ್ಲಾ, ಸೋಫೋರೆ, ಘಂಡೇರ್ಬಾಗ್‌ಗಳಲ್ಲಿ ಒಂದು ವೈದ್ಯಕೀಯ ತಂಡವು ಧಾವಿಸಿ ಎಲ್ಲಾ ಅರ್ಹ ರೋಗಿಗಳಿಗೆ ತಪಾಸಣೆ ನಡೆಸಿ, ಚಿಕಿತ್ಸೆ ನೀಡಿ ಶಸ್ತ್ರಚಿಕಿತ್ಸೆಯನ್ನೂ ಕೂಡ ನೆರವೇರಿಸಿ, ಬಹಳ ಜವಾಬ್ದಾರಿಯುತ ಯೋಜನೆಯನ್ನು ಅತೀ ಸೂಕ್ಷ್ಮ ಪ್ರದೇಶಗಳಲ್ಲೂ ಸಹ ನೆರವೇರಿಸಿರುವುದು ರೋಟರಿಯ ಒಂದು ಮಹತ್ತರ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಮಾಹಿತಿಯ ಪ್ರಕಾರ 10 ಸಾವಿರ ಶಸ್ತ್ರಚಿಕಿತ್ಸೆಗಳನ್ನು ವಿವಿಧರೀತಿಯ ವಿಶೇಷ ತಜ್ಞರುಗಳಿಂದ ನಡಸಲಾಗಿರುವುದು ಗಮನಿಸಬೇಕಾದ ಅಂಶವಾಗಿದೆ.



## ಸಂಪಾದಕೀಯ

### ಪಕ್ಷಿಗಳಿಂದ ಜೀವನದ ಪಾಠ ಕಲಿಯೋಣ

ಮನುಷ್ಯ ತಾನು ಬುದ್ಧಿವಂತ ಪ್ರಾಣಿ ಎಂದು ಭಾವಿಸಿದ್ದಾನೆ. ಆದರೆ ನಮ್ಮ ದಿನನಿತ್ಯದ ನಡವಳಿಕೆ, ಬದುಕುವ ಬಗೆಯಲ್ಲಿ ಪ್ರಕೃತಿ ಸಹಜವಾಗಿ ಬದುಕುವ ಪ್ರಾಣಿಪಕ್ಷಿಗಳು ನಮಗಿಂತಲೂ ಮಿಗಿಲು ಎಂದು ತಿಳಿಯಬೇಕಿದೆ. ಬನ್ನಿ, ಅವುಗಳನ್ನು ಅರಿತು ನಾವು ಕಲಿಯಬಹುದಾದ ಕೆಲವು ಸಂಗತಿಗಳನ್ನು ನೋಡೋಣ.

- ಪಕ್ಷಿಗಳು ರಾತ್ರಿ ಏನನ್ನೂ ತಿನ್ನುವುದಿಲ್ಲ.
- ರಾತ್ರಿಯಲ್ಲಿ ತಿರುಗಾಡುವುದಿಲ್ಲ
- ತಮ್ಮ ಮಗುವಿಗೆ ಸರಿಯಾದ ಸಮಯದಲ್ಲಿ ಶಿಕ್ಷಣ ಕಲಿಸುತ್ತದೆ.
- ಗಬಗಬನೆ ಗಟ್ಟಿಯಾಗಿರುವುದನ್ನು ತಿನ್ನುವುದಿಲ್ಲ. ಎಷ್ಟೇ ಕಾಳು ಹಾಕಿದರೂ ಸ್ವಲ್ಪ ತಿಂದು ಹಾರಿಹೋಗುತ್ತದೆ.
- ರಾತ್ರಿಯಾದ ತಕ್ಷಣ ನಿದ್ರೆಗೆ ಹೋಗುತ್ತವೆ. ಬೆಳಗ್ಗೆ ಬೇಗ ಏಳುತ್ತವೆ ಚಿಲಿಪಿಲಿ ಹಾಡುತ್ತಾ ಏಳುತ್ತವೆ.
- ತಮ್ಮ ಆಹಾರ ಪದ್ಧತಿಯನ್ನು ಎಂದಿಗೂ ಬದಲಾಯಿಸುವುದಿಲ್ಲ.
- ತಮ್ಮ ದೈಹಿಕ ಚಟುವಟಿಕೆಗೆ ಮೂಲಕ ನಿರಂತರವಾಗಿ ಕೆಲಸ ಮಾಡಿ, ರಾತ್ರಿ ಹೊರತುಪಡಿಸಿ ವಿಶ್ರಾಂತಿ ಪಡೆಯುವುದಿಲ್ಲ.
- ತಮಗೆ ಕಾಯಿಲೆ ಬಂದರೆ, ಅವು ತಿನ್ನುವುದನ್ನು ನಿಲ್ಲಿಸುತ್ತವೆ ಮತ್ತು ಆರೋಗ್ಯ ಚೆನ್ನಾಗಿದ್ದಾಗ ಮಾತ್ರ ಅವು ತಿನ್ನುತ್ತವೆ.
- ತಮ್ಮ ಮಗುವಿಗೆ ಸಾಕಷ್ಟು ಪ್ರೀತಿಯನ್ನು ನೀಡುತ್ತವೆ.
- ಕಾಯಿಲೆಗಳನ್ನು ದೈಹಿಕ ಕೆಲಸದಿಂದಲೇ ಸರಿ ಪಡಿಸಿಕೊಳ್ಳುತ್ತವೆ.
- ಪ್ರಕೃತಿಯಿಂದ ಎಷ್ಟು ಬೇಕೋ ಅಷ್ಟು ಮಾತ್ರ ಪಡೆಯುತ್ತವೆ.
- ತಮ್ಮ ಗೂಡನ್ನು ಪರಿಸರ ಸ್ನೇಹಿಯಾಗಿಸಿಕೊಳ್ಳುತ್ತವೆ.
- ತಮ್ಮ ಸ್ವಂತ ಭಾಷೆಯನ್ನು ಬಿಟ್ಟು, ಇತರ ಅರ್ಥವಾಗದ ಭಾಷೆಯಲ್ಲಿ ಸಂವಹನ ಮಾಡುವುದಿಲ್ಲ.
- ತಮ್ಮ ಮಕ್ಕಳಿಗೆ ಬದುಕುವ ಶಿಕ್ಷಣವನ್ನು ತಾವೇ ನೀಡುತ್ತವೆ. ಬೇರೆಯವರ ಬಳಿ ಟ್ಯೂಷನ್‌ಗೆ ಕಳಿಸುವುದಿಲ್ಲ.
- ತಮಗಾಗದ ಪರಿಸರದಲ್ಲಿ ಒಂದು ಕ್ಷಣವು ಇರುವುದಿಲ್ಲ.
- ಶತ್ರುವಿನ ಮುನ್ಸೂಚನೆ ಸಿಕ್ಕ ತಕ್ಷಣ ಉಳಿದ ಪಕ್ಷಿ ಪ್ರಾಣಿ ಸಂಕುಲಗಳಿಗೆ ಎಚ್ಚರಿಕೆ ಸಂದೇಶ ರವಾನಿಸುತ್ತವೆ ಮತ್ತು ರಕ್ಷಿಸುತ್ತವೆ.
- ತಮ್ಮದಲ್ಲದ ವಸ್ತುವನ್ನು ತಿರುಗಿ ಸಹ ನೋಡುವುದಿಲ್ಲ.
- ಪ್ರಕೃತಿ ನಿಯಮವನ್ನು ಚಾಚು ತಪ್ಪದೇ ಪಾಲಿಸುತ್ತವೆ.
- ಹಸಿವೆಯಾದಾಗ ಮಾತ್ರ ಆಹಾರ ಪಡೆಯುತ್ತದೆ.
- ಅವು ಬೇರೆ ಬೇರೆ ಪಕ್ಷಿಗಳ ಜೊತೆ ದ್ವೇಷ ಸಾಧನೆ ಮಾಡುವುದಿಲ್ಲ.

ಹೀಗೆ ಪ್ರಾಣಿ–ಪಕ್ಷಿಗಳಿಂದ ಇನ್ನೂ ಹಲವಾರು ಸಂಗತಿಗಳನ್ನು ನಾವು ಗ್ರಹಿಸಬಹುದಲ್ಲವೇ ! ಇದು ತುಂಬಾ ಬೋಧಪ್ರದವಲ್ಲವೇ! ನಾವು ಸಹ ಅವುಗಳಿಂದ ಏನನ್ನಾದರೂ ಕಲಿತರೆ, ಜೀವನವು ಸರಳ, ಸುಂದರ ಮತ್ತು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ ಅಲ್ಲವೇ...!?

• ರೊ. ಎಂ. ಮಾಧವಾಚಾರ್

## Happy Birthday



Dr.Shivakumar (HPC)
*19th July*



Rudra Gowda
*20th July*



Nirmala Mahadev
*20th July*



Manjunath D L
*21st July*

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:


**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.




To,

Book Post